ಕರ್ನಾಟಕ ಸರ್ಕಾರ
[ಕನ್ನಡ ಮತ್ತು ಸಂಸ್ಕೃತಿ ಇಲಾಖೆ]
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, [**ಕಾವಾ**]
ಸಿ.ಟಿ.ಐ.ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು 570 001.
ದೂರವಾಣಿ: **0821-2438930-31 ಫ್ಯಾಕ್ಸ್ ಸಂಖ್ಯೆ: 0821-2438931**
e-mail: deancava@gmail.com

Government of Karnataka
[Dept. of Kannada & Culture]
Chamarajendra Govt. College of Visual Arts, [CAVA]
C.T.I. Building, Sayyajirao Road, Mysore 570001
**Phone: 0821-2438930/31 Tel. Fax: 0821-2438931**
e-mail: deancava@gmail.com

**ಕಾವಾ**
**25 ವರ್ಷ**

**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು** 1982ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ಸರ್ಕಾರದ ಏಕೈಕ ಕಲಾ ಶಿಕ್ಷಣ ನೀಡುವ ಪ್ರಥಮ ದರ್ಜೆ ಕಾಲೇಜಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯು ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ, ಅನ್ವಯ ಕಲೆ, ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ ಹಾಗೂ ಕಲಾ ಇತಿಹಾಸ ವಿಭಾಗಗಳಲ್ಲಿ ಬಿ.ಎಫ್.ಎ. ಪದವಿಯನ್ನು ಹಾಗೂ ಶಿಲ್ಪಕಲೆ, ಚಿತ್ರಕಲೆ ಮತ್ತು ಅಚ್ಚುಕಲೆ ವಿಭಾಗದಲ್ಲಿ ಎಂ.ಎಫ್.ಎ. ಪದವಿಯನ್ನು ನೀಡುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜನೆ ಹೊಂದಿರುವ ಸಂಸ್ಥೆಯು ನ್ಯಾಕ್ ಸಮಿತಿಯಿಂದ "ಬಿ+" ಮಾನ್ಯತೆಯನ್ನು ಪಡೆದಿದೆ.

**ಪ್ರವೇಶ:** ಸಂಸ್ಥೆಗೆ ಪ್ರವೇಶ ಕೋರಲಚ್ಚಿಸುವ ವಿದ್ಯಾರ್ಥಿಗಳು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, 22 ವರ್ಷಗಳ ವಯೋಮಿತಿಯೊಳಗಿದ್ದು, ಸಂಸ್ಥೆಯು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ಅವಶ್ಯಕವಾಗಿರುತ್ತದೆ. 5 ವರ್ಷಗಳ ಪದವಿ ಶಿಕ್ಷಣವು ಎರಡು ವರ್ಷ ಫೌಂಡೇಶನ್ ಹಾಗೂ ಮೂರು ವರ್ಷ ಪದವಿ ತರಗತಿಯನ್ನು ಒಳಗೊಂಡಿದೆ.

**ಸೌಲಭ್ಯಗಳು:**

- ಹಾಜರಾತಿ ಆಧಾರದ ಮೇಲೆ ಮೂಲ ತರಗತಿಯ ವಿದ್ಯಾರ್ಥಿಗಳಿಗೆ ರೂ. 200, ಬಿ.ಎಫ್.ಎ. ಪದವಿ ತರಗತಿಯ ವಿದ್ಯಾರ್ಥಿಗಳಿಗೆ ರೂ. 250, ಎಂ.ಎಫ್.ಎ. ಪದವಿ ತರಗತಿಯ ವಿದ್ಯಾರ್ಥಿಗಳಿಗೆ ರೂ.500 ಮಾಸಿಕ ಸಾಮಾಗ್ರಿ ವೆಚ್ಚ ನೀಡಲಾಗುವುದು.
- ಸರ್ಕಾರದ ವತಿಯಿಂದ ಶೈಕ್ಷಣಿಕ ಪ್ರವಾಸ.
- ಎಲ್ಲಾ ವಿಭಾಗಗಳಲ್ಲಿ ಕಂಪ್ಯೂಟರ್ ಹಾಗೂ ಅಂತರ್ಜಾಲದ ಸೌಲಭ್ಯ ಹಾಗೂ ಉತ್ತಮ ಅನುಭವಿ ಶಿಕ್ಷಕರು.
- ಎಲ್ಲಾ ವಿಭಾಗಗಳಲ್ಲಿ ವಿಶೇಷ ಆಹ್ವಾನಿತರಿಂದ ಕಾರ್ಯಗಾರ, ಶಿಬಿರ, ಸ್ಲೈಡ್ ಶೋ, ಚರ್ಚೆ ಹಾಗೂ ಸೆಮಿನಾರ್.
- ಎಲ್ಲಾ ವಿಭಾಗಗಳಲ್ಲಿ ಸುಸಜ್ಜಿತ ಉಪಕರಣ ಹಾಗೂ ಸಲಕರಣೆಗಳು.
- ಕರ್ನಾಟಕದಲ್ಲಿಯೇ ಅತ್ಯುತ್ತಮ ದೃಶ್ಯಕಲಾ ಗ್ರಂಥ ಭಂಡಾರ.

**ವ್ಯಾಸಂಗ ಶುಲ್ಕ:** ಪ್ರಥಮ ಮೂಲ ತರಗತಿ – 4475.00 (2011-12 ನೇ ಶೈಕ್ಷಣಿಕ ಸಾಲು)
**ದ್ವಿತೀಯ ಮೂಲ ತರಗತಿ** – **3170.00** (2011-12 ನೇ ಶೈಕ್ಷಣಿಕ ಸಾಲು)
ಪ್ರಥಮ ಬಿ.ಎಫ್.ಎ – 4510.00 (2011-12 ನೇ ಶೈಕ್ಷಣಿಕ ಸಾಲು)
ದ್ವಿತೀಯ ಮತ್ತು ತೃತೀಯ ಬಿ.ಎಫ್.ಎ – 3705.00 (2011-12 ನೇ ಶೈಕ್ಷಣಿಕ ಸಾಲು)

**ಅವಕಾಶಗಳು:** ಸಂಸ್ಥೆಯಲ್ಲಿ ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ವೃತ್ತಿಪರ ಕಲಾವಿದರಾಗಿ, ಅನಿಮೇಟರ್ಸ್‌ಗಳಾಗಿ, ವಿನ್ಯಾಸಕರಾಗಿ, ಪತ್ರಿಕೋದ್ಯಮಿಗಳಾಗಿ, ಛಾಯಾಚಿತ್ರಕಾರರಾಗಿ, ಇಲ್ಯೂಸ್ಟ್ರೇಟರ್‌ಗಳಾಗಿ, ರಂಗ ವಿನ್ಯಾಸಕರಾಗಿ, ಮಾಧ್ಯಮ ನಿರ್ದೇಶಕರಾಗಿ ರಾಜ್ಯ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

**ಡೀನ್ ಕಾವಾ, ಸಿ.ಟಿ.ಐ.ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು-570001, ದೂ.0821-2438931**

| | |
|---|---|
| Introduction [CAVA] | **Chamarajendra Govt. College of Visual Arts [CAVA]**, Mysore established in the year 1981[order No. ED4 MSR 81, Bangalore, Dated January 9th 1981] by the Government of Karnataka is a pioneering degree college of visual arts. |
| Historical Background | Situated in the heart of the Mysore city i.e. Sayyajirao Road, the main idea behind its origin was to upgrade C.T.I. and to retain the glorious past. The institute owes its indebtedness to the late Maharaja of Mysore i.e. Nalvadi Krishna Raja Wodeyar.<br>CAVA encourages the cultivation of inherent artistic skills among aspiring art students and promotes excellence in all forms of visual art. Prof. V.M. Sholapurkar, a product of the J.J. School of Art was appointed as the Dean to head the institute (1982-88). Being an eminent scholar and experienced artist, Prof. V.M. Sholapurkar studied thoroughly the functioning of three prominent Universities in the field of Visual Arts (Baroda, Shantiniketan & J.J. School) and strove to adopt the best. The teaching faculty of CAVA are mainly from these major universities. The college is affiliated to the University of Mysore. **The college is accredited B+ by NAAC.**<br>Prof. V.M.Sholapurkar, the Founder Dean of CAVA had a vision to collect rare portraits of eminent artists. During his tenure as Dean, works of great artists like Lang Hammer, K.K.Hebbar, S.N.Swamy, Sambaji Kadam, Sonadekar, Rumale Channabasappa and R.M.Hadpad were purchased and are now exhibited in the gallery and the library of the college. Apart from these works of artists, works of the resource persons who have conducted workshops are also added to the collection like Rini Dhumal, Laxma Gowd, Rekha Rodwitya, Khanderao, N.G.Bagodi, Ajit Dube, A.C.Sagar.<br>Some of the eminent artists who visited CAVA during the past years are R.K. Laxman, K.K. Hebbar, Rini Dhumal, K.G Subramaniam, Ghulam Mohammed Sheik, Sambaji Kadam, Gangubai Hangal, N.Pushapamala, Laxma Gowd, D.L.N. Reddy, Deepak Kannal, Ratan Parimoo, Vidya Bhushan, P.T.Reddy, Amol Palekar, Lauri Baker, D.G Kulkarni, Ara, Chaduranga, B.C. Ramachandra Sharma, U.R.Ananthmurthy, Rumale Channabasappa, B.V. Karanth, Shivaram Karanth, S.M.Pandit, R.M.Hadpad, C.Chandrashekar, S.G.Vasudev and V G Andani. |
| Aims | Chamarajendra Academy of Visual Arts, Mysore was established in 1981 by the Government of Karnataka with a view to encourage the cultivation of inherent artistic skills among aspiring art students and to promote excellence in all forms of visual arts. CAVA a premier institution in the field of visual arts.<br>The syllabus is designed to encourage creative instincts and craftsmanship. The foundation course is intended to initiate the students into the rudiments of art and to develop their basic skills in visual arts. It also provides them with an introduction to several avenues of specialization so that they are able to make an informed choice of the subjects for degree course. |
| Information about the department | The college offers a two year foundation course and three year specialization (B.F.A.) course in six disciplines, Painting, Graphics, Sculpture, Applied Art, Photography & Photojournalism and History of Art. During 2002-03 post-graduation courses leading to M.F.A. in Painting, Graphics, & Sculpture were started. This is the only institute offering material expense to Foundation, B.F.A |

| | |
|---|---|
| | and M.F.A students of Rs. 200, Rs. 250 and Rs.500per month respectively on the basis of monthly attendance. |
| Academic staff and description | Some members of the faculty have either completed their Ph.D or are pursuing research. The faculty are invited as judges, resource persons and counselors to various institutes and organizations. They also participate in State, Regional, National and International exhibitions. The teaching faculty participates in exhibitions, workshops, seminars held in India and abroad. They are also awardees of State and National level awards. They are the members of Shilpakala Academy, Karnataka Lalitkala Academy and have voting powers for the Central Lalitkala Academy.<br>Annual educational tours are conducted for the students of I & II Foundation wherein students visit places of historical importance like Badami, Pattadakal, Aihole, Hampi, Belur, Halebid, Sravanabelagola etc., For the students of B.F.A., tours are conducted to Konark, Bhubaneswar, Jaipur, Jaganathpuri, Sanchi, Ajantha, Ellora, Elephanta, Bombay, Jodhpur, Ahmedabad, Delhi, Calcutta, Darjeeling and Mount Abu, which are of historical importance. To gain professional exposure, students visit studios of photographers and artists, ad agencies and newspaper organisations. The traveling expenses are borne by the institute.<br>The students and staff can avail the facility of redressing their grievances from the Redressal Cell constituted by the college. The students are given scholarships under various heads S.C. & S.T. scholarship, Ministry of labour scholarship, Shilpakala Academy Scholarship, Chepudi Ponnappa Rajaram Scholarship and National scholarship for fine art students. Two students of the department of sculpture have attended the interview on Nov 8, 2005 for the award of national scholarships. The students receive a Gold medal (K. K. Hebbar for excellency in examination and a cash prize, (Narasingh Rao cash prize) every year. The Javagal Trust helps to poor students to giving scholarship and the students are also recipients of various awards. |

ಕರ್ನಾಟಕ ಸರ್ಕಾರ

## ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು

### ವಿವರಣಾ ಪತ್ರ

ಸರ್ಕಾರಿ ಆದೇಶ ಸಂಖ್ಯೆ:ಇಡಿ4/ಎಂಎಸ್ಎ 81/ ಬೆಂಗಳೂರು, ದಿನಾಂಕ:9-01-1981ರನ್ವಯ ಮೈಸೂರು ನಗರದಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸ್ಥಾಪನೆಯಾಗಿರುತ್ತದೆ. ಉತ್ಕಾಂಕ್ಷಿ ಕಲಾ ವಿದ್ಯಾರ್ಥಿಗಳಲ್ಲಿ ಇರುವ ಕಲಾತ್ಮಕ ಕೌಶಲಗಳ ಸಂವರ್ಧನೆಯನ್ನು ಪ್ರೋತ್ಸಾಹಿಸುವುದು ಹಾಗೂ ದೃಶ್ಯಕಲೆಗಳ ಎಲ್ಲಾ ಬಗೆಗಳ ಉತ್ಕೃಷ್ಟತೆಯನ್ನು ಅಭಿವೃದ್ಧಿ ಪಡಿಸುವುದೇ ಇದರ ಉದ್ದೇಶವಾಗಿದೆ.

ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯನ್ನು ಪುನರ್‌ಚಿಸುವ ಕುರಿತು 1976ರಲ್ಲಿ ರೂರಿಕ್ ಕಮಿಟಿ ಸಲ್ಲಿಸಿದ ವರದಿಯನ್ವಯ ಪ್ರತ್ಯೇಕ ಆಡಳತ ಮಂಡಳಯೊಂದಿಗೆ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯನ್ನು ಸ್ಥಾಪಿಸಲಾಯಿತು. ಕಾವಾ ಸಂಸ್ಥೆಯು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು ದೃಶ್ಯಕಲಾ ಮಾದ್ಯಮದ ಆರು ಪ್ರಕಾರಗಳಲ್ಲಿ ವಿದ್ಯಾರ್ಥಿಗಳಗೆ ಶಿಕ್ಷಣವನ್ನು ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ನೀಡಲಾಗುತ್ತಿದೆ. ಸದರಿ ಸಂಸ್ಥೆಯು ಮೈಸೂರು ವಿಶ್ವವಿದ್ಯಾನಿಲಯದಿಂದ ಶಾಶ್ವತ ಸಂಯೋಜನೆ ಪಡೆದಿದೆ.

1. ಚಿತ್ರಕಲೆ (ಪೇಂಟಿಂಗ್)
2. ಅಚ್ಚುಕಲೆ (ಗ್ರಾಫಿಕ್ಸ್)
3. ಶಿಲ್ಪಕಲೆ (ಸ್ಕಲ್ಪ್ಚರ್)
4. ಅನ್ವಯ ಕಲೆ( ಅಪ್ಲೈಡ್ ಆರ್ಟ್)
5. ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ (ಫೋಟೋಗ್ರಾಫಿ ಅಂಡ್ ಫೋಟೋಜರ್ನಲಿಜಂ)
6. ಕಲಾ ಇತಿಹಾಸ (ಆರ್ಟ್ ಹಿಸ್ಟರಿ) ತ್ರಗತಿಗಳನ್ನು ಮೈಸೂರು ನಗರದ ಸಿಟಿಐ ಕಟ್ಟಡದಲ್ಲಿ ನಡೆಸಲಾಗುತ್ತಿದೆ.

ಸಂಸ್ಥೆಯ ಕಾರ್ಯಭಾರವನ್ನು ಉತ್ತಮವಾಗಿ ನಡೆಸಲು 59 ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ:ಐಟಿವೈ130/ ಕರಅ87/ ದಿ.14-01-92ರಆದೇಶದಲ್ಲಿ ಸೃಜಿಸಲಾಗಿದೆ. ಅದರಲ್ಲಿ 42 ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಭರ್ತಿಮಾಡಲಾಗಿದೆ. 5 ವರ್ಷಗಳ ಪದವಿ ಶಿಕ್ಷಣ ಮುಗಿಸಿದ ಬಳಕ ಆಸಕ್ತಿ ಇರುವ ವಿದ್ಯಾರ್ಥಿಗಳು ಚಿತ್ರಕಲೆ, ಶಿಲ್ಪಕಲೆ ಮತ್ತು ಅಚ್ಚುಕಲೆ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅಧ್ಯಯನ ಮಾಡಬಹುದಾಗಿದೆ.

**ಪ್ರಥಮ ಮೂಲತರಗತಿ/ ಪ್ರಥಮ ಬಿ.ಎಫ್.ಎ ವಿತರ'ಣ ಪತ್ರದ ವಿವರ**

ಈ ಕಾಲೇಜು ದೃಶ್ಯಕಲೆಗಳಲ್ಲಿ ಬ್ಯಾಚಲರ್ಸ್ ಪದವಿ ಪಡೆಯಲು ಆರು ವ್ಯಾಸಂಗದ ವಿಭಾಗಗಳನ್ನು ಹೊಂದಿದ್ದು ಐದು ವರ್ಷಗಳ ಶಿಕ್ಷಣ ನೀಡುತ್ತದೆ. ಈ ಶಿಕ್ಷಣದಲ್ಲಿ ಎರಡು ಭಾಗಗಳವೆ. ಅ) ಎರಡು ವರ್ಷಗಳ ಫೌಂಡೇಷನ್ ಶಿಕ್ಷಣ ಆ) ಮೂರು ವರ್ಷಗಳ ವಿಶೇಷ ಶಿಕ್ಷಣವಿದ್ದು, ಆರು ವ್ಯಾಸಂಗದ ಶಾಖೆಗಳ ಪೈಕಿ ಯಾವುದಾದರೊಂದರಲ್ಲಿ ಬ್ಯಾಚುಲರ್ಸ್ ಪದವಿಗೆ ಅವಕಾಶ ಮಾಡಿಕೊಡಲಾಗುವುದು. ಮೂರು ವರ್ಷಗಳ ವಿಶೇಷ ಶಿಕ್ಷಣ ಸೃಜನಾತ್ಮಕ ಮೂಲ ಪ್ರವೃತ್ತಿ ಹಾಗೂ ಕಲಾ ಕೌಶಲವನ್ನು ಪ್ರೋತ್ಸಾಹಿಸಲು ಅನುಕೂಲವಾಗುವಂತೆ ಪಠ್ಯಕ್ರಮವನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಗೆ ಕಲೆಯ ಮೂಲಭೂತ ತತ್ವಗಳನ್ನು ಪರಿಚಯಿಸಲು ಹಾಗೂ ದೃಶ್ಯಕಲೆಗಳಲ್ಲಿ ಅವರ ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಫೌಂಡೇಷನ ಶಿಕ್ಷಣಕ್ಕೆ ಇದೆ. ವಿಶೇಷಿಕರಣದ ಹಲವು ಮಾರ್ಗಗಳನ್ನು ಅವರಿಗೆ ಪರಿಚಯಿಸುತ್ತದೆ ಹಾಗೂ ಬಿ.ಎಫ್.ಎ. ಶಿಕ್ಷಣದಲ್ಲಿ ಸೂಕ್ತ ವಿಷಯ ಆಯ್ಕೆ ಮಾಡಿಕೊಳ್ಳಲು ನೆರವಾಗುತ್ತದೆ. ಬಿ.ಎಫ್.ಎ. ಪದವಿಗೆ ಅವಕಾಶ ಮಾಡಿಕೊಡುವ ವಿಶೇಷ ಶಿಕ್ಷಣಗಳು ಎಂದರೆ,

1. ಚಿತ್ರಕಲೆ (ಪೇಂಟಿಂಗ್)
2. ಅಚ್ಚುಕಲೆ (ಗ್ರಾಫಿಕ್ಸ್)
3. ಶಿಲ್ಪಕಲೆ (ಸ್ಕಲ್ಪ್ಚರ್)
4. ಅನ್ವಯಕಲೆ (ಅಪ್ಲೈಡ್ ಆರ್ಟ್)
5. ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ (ಫೋಟೋಗ್ರಾಫಿ ಅಂಡ್ ಫೋಟೋಜರ್ನಲಿಸಂ)
6. ಕಲಾ ಇತಿಹಾಸ (ಹಿಸ್ಟರಿ ಆಫ್ ಆರ್ಟ್)

**ಭಾಷೆಗಳು:** ಬಿ.ಎಫ್.ಎ. ಗೆ ನಿಗಧಿ ಪಡಿಸಿದ ಭಾಷೆಗಳ ಆಯ್ಕೆ ಹಾಗೂ ಭಾಷಾ ವಿನಾಯತಿ ವಿಶ್ವ ವಿದ್ಯಾನಿಲಯದ ನಿಯಮಾನುಸಾರ ಇರುತ್ತದೆ.

**ಸೂಚನೆ:**

1. ಕಾಲೇಜಿನಲ್ಲಿ ಯಾವುದಾದರೂ ಭಾಷೆಯ ಬೋಧನೆಗೆ ಅವಕಾಶ ಇಲ್ಲದಿದ್ದು, ವಿದ್ಯಾರ್ಥಿಯು ಆ ಭಾಷೆಯನ್ನು ಅಧ್ಯಯನಕ್ಕೆ ಬಯಸಿದಲ್ಲಿ ಅವರ ಖಾಸಗಿ ಆದ್ಯಯನಕ್ಕೆ ವಿಶ್ವವಿದ್ಯಾನಿಲಯ ಅನುಮತಿ ನೀಡುತ್ತದೆ ಹಾಗೂ ಹಾಜರಾತಿಯ್ನು ಕಡ್ಡಾಯ ಗಮನಿಸದೆ ಪರೀಕ್ಷೆಗೆ ಕುಳತುಕೊಳ್ಳಲು ಅವಕಾಶವಿದೆ.
2. ಹೊರ ವಿಶ್ವವಿದ್ಯಾನಿಲಯ ಮತ್ತು ಹೊರ ರಾಜ್ಯದ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಅಂತಹ ಅಭ್ಯರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆದುಕೊಂಡು ನಿಗಧಿತ ದಿನಾಂಕದೊಳಗೆ ಶುಲ್ಕ ಪಾವತಿಮಾಡತಕ್ಕದ್ದು.
3. ಆಯ್ಕೆಯಾದ ಅಭ್ಯರ್ಥಿಗಳು ನಿಗಧಿತ ಶುಲ್ಕವನ್ನು ತಕ್ಷಣದಿಂದ ಪಾವತಿಸಬಹುದು.

**ಕಾಲೇಜಿನ ಕೆಲಸದ ವೇಳೆ:** ಸೋಮವಾರದಿಂದ ಶುಕ್ರವಾರದವರಗೆ ತರಗತಿಗಳು ಬೆಳಗ್ಗೆ 9:30 ರಿಂದ ಮದ್ಯಾಹ್ನ 4:30ರವರೆಗೆ ಹಾಗೂ ಶನಿವಾರ ಬೆಳಗ್ಗೆ 9:30 ರಿಂದ 1:30ರವರಗೆ ನಡೆಯುತ್ತದೆ.

**ತರಗತಿಗಳು ನಡೆಯುವ ಸ್ಥಳ**: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಯ್ಯಾಜಿರಾವ್ ರಸ್ತೆ, ಮೈಸೂರು.

**ಅರ್ಜಿಶುಲ್ಕ**: ಪ್ರವೇಶ ಅರ್ಜಿಯನ್ನು ಕಛೇರಿಯಲ್ಲಿ ರೂ 100/- ಶುಲ್ಕ ಪಾವತಿಸಿ ಪಡೆದುಕೊಳ್ಳಬಹುದು. ಅಂಚೆ ಮೂಲಕ ಅರ್ಜಿ ಫಾರಂ ಮತ್ತು ವಿವರಣ ಪತ್ರ ಪಡೆಯಲಿಚ್ಛಿಸುವವರು ಡೀನ್, ಕಾವಾ, ಮೈಸೂರು ಇವರಿಗೆ ಸಂದಾಯವಾಗುವಂತೆ ಪಡೆಯಲಾದ ರೂ. 125/- ಮೌಲ್ಯದ ಡಿಮಾಂಡ್ ಡ್ರಾಫ್ಟ್ ಕಳುಹಿಸುವುದು. ಚೆಕ್ಕುಗಳು, ಪೋಸ್ಟಲ್ ಆರ್ಡರ್‌ಗಳು ಮತ್ತು ಮನಿಆರ್ಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ರವಾನೆಯಲ್ಲಾಗುವ ಯಾವುದೇ ವಿಳಂಬ ಅಥವಾ ನಷ್ಟಕ್ಕೆ ಅಕಾಡೆಮಿಯು ಯಾವುದೇ ರೀತಿ ಜವಾಬ್ದಾರಿ ಹೊಂದುವುದಿಲ್ಲ.

ಸೂಕ್ತ ಭರ್ತಿಮಾಡಿದ ಅರ್ಜಿಗಳನ್ನು ನಿರ್ದಿಷ್ಟಪಡಿಸಲಾಗಿರುವ ದಾಖಲಾತಿಗಳ ಪ್ರತಿಗಳೊಡನೆ ನಿಗದಿತ ದಿನಾಂಕದೊಳಗೆ ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಿ.ಟಿ.ಐ. ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು- 570001 ಈ ವಿಳಾಸಕ್ಕೆ ತಲುಪಿಸಬೇಕು. ಅನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಅರ್ಜಿಯೊಡನೆ ಸಲ್ಲಿಸಬೇಕಾಗಿರುವ ದಾಖಲಾತಿಗಳ ಯಥಾಪ್ರತಿಗಳು:

1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರ
2. ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ: ಹಿಂದುಳಿತ ಜಾತಿಗಳಿಗೆ ಸೇರಿದ ಅಭ್ಯರ್ಥಿಗಳು ಜಾರಿಯಲ್ಲಿರುವ ಮೀಸಲಾತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಸೂಕ್ತ ಪ್ರಾಧಿಕಾರಿಯಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು. ಎಲ್ಲಾ ದಾಖಲೆಗಳ ಪ್ರಮಾಣಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ಇವನ್ನು ಪರಿಶೀಲಿಸಿ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯ ಅನುಮೋದಿಸಿದ ನಂತರ ಹಿಂದಿರುಗಿಸಲಾಗುವುದು.
3. ಆಯಾ ವರ್ಗಗಳ ಮೀಸಲಾತಿಯಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು: ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸುವ ನಮೂನೆಗಳಲ್ಲಿ ಪೂರ್ಣ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸುವುದು.

**ವಿಶೇಷ ಸೂಚನೆ:**

1. ಅವಶ್ಯವಿರುವ/ ಸಂಬಂಧಿಸಿದ ದಾಖಲಾತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಒಂದುವೇಳೆ ಅಭ್ಯರ್ಥಿಗಳು ದಾಖಲಾತಿಗಳನ್ನು ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2. ಪ್ರವರ್ಗ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಿ ಸಾಮಾನ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿಸಲಾಗುವುದು.
3. ಸದರಿ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಯವರಿಂದ ದೃಢೀಕರಿಸಿ ಸಹಿ ಮತ್ತು ಮೊಹರು ಹೊಂದಿರಬೇಕು.
4. ಮೊದಲನೆಯ ಫೌಂಡೇಷನ್ ಶಿಕ್ಷಣದಲ್ಲಿ ಒಟ್ಟು ಪ್ರವೇಶಾವಕಾಶ 60 ಅಭ್ಯರ್ಥಿಗಳಿಗೆ ಮಾತ್ರ.
5. ಪ್ರವೇಶಾತಿ ಸಮಯದಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ: ಹಿಂದುಳಿದ ಜಾತಿ ಸ್ಥಾನಗಳ ಮೀಸಲಾತಿಯು ಹಾಲಿ ಜಾರಿಯಲ್ಲಿರುವ ಸರ್ಕಾರಿ ಆದೇಶಗಳಿಗೆ ಅನುಗುಣವಾಗಿರುತ್ತದೆ.
6. ಶೈಕ್ಷಣಿಕ ವರ್ಷದ ಕ್ಯಾಲಂಡರ್ ವಿಶ್ವವಿದ್ಯಾನಿಲಯವು ಅನುಮೋದಿಸಿರುವಂತೆ ಜಾರಿಯಲ್ಲಿರುತ್ತದೆ.

**ಅಭ್ಯರ್ಥಿಗಳ ಪ್ರವೇಶಾವಕಾಶ**:

1. ಕರ್ನಾಟಕ ವಿಧ್ಯಾರ್ಥಿಗಳಿಗೆ ಶೇ. 90 ಸೀಟುಗಳನ್ನು ಕಾಯ್ದಿರಿಸಲಾಗಿದೆ.
2. ಗಡಿನಾಡ ಕನ್ನಡಿಗರಿಗೆ ಆದ್ಯತೆ ನೀಡಿ ಗಡಿನಾಡ ಮತ್ತು ಹೊರನಾಡ ಕನ್ನಡಿಗರಿಗೆ ಶೇ. 10 ಸೀಟುಗಳನ್ನು ಕಾಯ್ದಿರಿಸಲಾಗಿದೆ. ಒಂದು ವೇಳೆ ಹೊರನಾಡ, ಗಡಿನಾಡ ಕನ್ನಡಿಗರು ಸಿಗದಿದ್ದಲ್ಲಿ ಇವರಿಗೆ ಕಾಯ್ದಿರಿಸಿದ ಶೇ. 10 ಸೀಟುಗಳನ್ನು ಬೇರೆ ರಾಜ್ಯದ ಅಭ್ಯರ್ಥಿಗಳಿಗೆ ಕೊಡಲಾಗುವುದು.

**ವಿಶೇಷ ಸೂಚನೆ**: ಗಡಿನಾಡ ಕನ್ನಡಿಗರು ಮತ್ತು ಹೊರನಾಡ ಕನ್ನಡಿಗರು ಆಯಾ ತಾಲ್ಲೂಕು ತಹಸೀಲ್ದಾರರವರಿಂದ ಪಡೆದ ದೃಢೀಕರಣ ಪತ್ರಗಳನ್ನು ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.

**ಸೀಟುಗಳ ಸ್ಪಷ್ಟೀಕರಣ**

| | | 100ಕ್ಕೆ | 60ಕ್ಕೆ |
|---|---|---|---|
| 1 | ಪ್ರವರ್ಗ- 1 | 4 | 2 |
| 11(ಎ) | ಪ್ರವರ್ಗ- 11(ಎ) | 15 | 9 |
| 11(ಬಿ) | ಪ್ರವರ್ಗ- 11(ಬಿ) | 4 | 2 |
| 111(ಎ) | ಪ್ರವರ್ಗ- 111(ಎ) | 4 | 2 |
| 111(ಬಿ) | ಪ್ರವರ್ಗ- 111(ಬಿ) | 5 | 4 |
| ಪರಿಶಿಷ್ಟ ಜಾತಿ | | 15 | 9 |
| ಪರಿಶಿಷ್ಟ ಪಂಗಡ | | 3 | 2 |
| ಸಾಮಾನ್ಯ ಅಭ್ಯರ್ಥಿ | | 50 | 30 |

ಪ್ರವೇಶಾತಿ ಸಮಯದಲ್ಲಿ ಜಾರಿಯಲ್ಲಿರುವ ಸರ್ಕಾರ ಆದೇಶದನ್ವಯ ಸೀಟುಗಳ ಹಂಚಿಕೆ ಮಾಡಲಾಗುವುದು.

**ಕಲಾಭಿರುಚಿ ಪರೀಕ್ಷೆ:** ಮೊದಲನೆಯ ಫೌಂಡೇಷನ್ ಶಿಕ್ಷಣಕ್ಕೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಕಲಾಭಿರುಚಿ ಪರೀಕ್ಷೆ ಹಾಗೂ ವೈಯುಕ್ತಿಕ ಸಂದರ್ಶನವಿರುತ್ತದೆ. ಪ್ರತಿಯೊಂದು ವಿಷಯಗಳಲ್ಲಿ ಶೇ. 50ಅಂಕ ಪಡೆಯಬೇಕು.

| ಪರೀಕ್ಷಾ ವಿಧಾನ | ಅಂಕಗಳು | ಪರೀಕ್ಷಾ ಅವಧಿ |
|---|---|---|
| ಡ್ರಾಯಿಂಗ್ | 50 ಅಂಕಗಳು | ಒಂದು ಗಂಟೆ |
| ಸಾಮಾನ್ಯ ಜ್ಞಾನ | 40 ಅಂಕಗಳು | ಅರ್ಧ ಗಂಟೆ |
| ವೈಯುಕ್ತಿಕ ಸಂದರ್ಶನ | 10 ಅಂಕಗಳು | – |
| ಒಟ್ಟು | 100 ಅಂಕಗಳು | |

ಕಲಾಭಿರುಚಿ ಪರೀಕ್ಷೆಗೆ ಅಗತ್ಯವಾದ ಡ್ರಾಯಿಂಗ್ ಬೋರ್ಡ್‌ಗಳು ಹಾಗೂ ಹಾಳೆಯನ್ನು ಅಕಾಡೆಮಿಯು ಒದಗಿಸುತ್ತದೆ. ವಿಧ್ಯಾರ್ಥಿಗಳೇ ಪೆನ್ಸಿಲ್‌ಗಳು, ಬ್ರಶ್‌ಗಳು, ಬಣ್ಣಗಳು ಇತ್ಯಾದಿಗಳನ್ನು ತರಬೇಕು ಹಾಗೂ ಸಂದರ್ಶನ/ ಕಲಾಭಿರುಚಿ ಪರೀಕ್ಷೆಗೆ ವಿಧ್ಯಾರ್ಥಿಗಳು ಸ್ವಂತ ಖರ್ಚಿನಲ್ಲೇ ಹಾಜರಾಗಬೇಕು ಹಾಗು ಸದರಿ ಪರೀಕ್ಷೆಗೆ ಯಾವುದೇ ಪ್ರತ್ಯೇಕ ಸೂಚನೆ ನೀಡಲಾಗುವುದಿಲ್ಲ. ವೈಯುಕ್ತಿಕ ಸಂದರ್ಶನಕ್ಕೆ ಹಾಜರಾಗುವಾಗ ತಾವು ರಚಿಸಿದ ಕಲಾಕೃತಿಗಳೇನಾದರು ಇದ್ದರೆ ಅದನ್ನು ತರಬೇಕು. ಅರ್ಜಿಯೊಂದಿಗೆ ಲಗತ್ತಿಸಿರುವ ನಡತೆ ಹಾಗೂ ಶಿಸ್ತಿನ ನಿಯಮಗಳನ್ನು ಪಾಲಿಸುವುದಾಗಿ (ಆಯ್ಕೆಯಾದ ಅಭ್ಯರ್ಥಿಗಳು ಘೋಷಣೆಗೆ ಸಹಿಹಾಕತಕ್ಕದ್ದು ಹಾಗೂ ಇದಕ್ಕೆ ಅವರ ತಂದೆ, ತಾಯಿ ಪೋಷಕರು ಸಹಿ ಹಾಕಬೇಕು. (ಕಡ್ಡಾಯ). ಶೈಕ್ಷಣಿಕ ವಿಚಾರಗಳಲ್ಲಿ ಡೀನ್‌ರವರ ನಿರ್ಧಾರವೇ ಅಂತಿಮವಾಗಿರುತ್ತದೆ.

**ಪ್ರಥಮ ಬಿ.ಎಫ.ಎ ಶಿಕ್ಷಣಕ್ಕೆ ಪ್ರವೇಶ:** ಪ್ರಥಮ ಬಿ.ಎಫ್.ಎ. ಶಿಕ್ಷಣಕ್ಕೆ ಪ್ರವೇಶಕೋರುವ ಅಭ್ಯರ್ಥಿಗಳು ದ್ವಿತೀಯ ಮೂಲತರಗತಿ ಅಥವಾ ತತ್ಸಮಾನವಾದ ಮೈಸೂರು ವಿಶ್ವವಿದ್ಯಾನಿಲಯದ ಅಥವಾ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹೊರ ವಿಶ್ವವಿದ್ಯಾನಿಲಯ, ಹೊರ ರಾಜ್ಯದ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಅಂತಹ ಅಭ್ಯರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ಅನುಮೋದನೆ ಪಡೆದುಕೊಂಡು ನಿಗಧಿತ ದಿನಾಂಕದೊಳಗೆ ಶುಲ್ಕ ಪಾವತಿಸತಕ್ಕದ್ದು. ಪ್ರಥಮ ಬಿ.ಎಫ್.ಎ. ತರಗತಿಗೆ ವಿಭಾಗಗಳಲ್ಲಿ ಲಭ್ಯವಿರುವ ಸೀಟುಗಳು, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ದ್ವಿತೀಯ ಮೂಲತರಗತಿಯಲ್ಲಿ ಪಡೆದ ಒಟ್ಟು ಅಂಕಗಳನ್ನು ಆಧರಿಸಿ ಪ್ರವೇಶ ನೀಡಲಾಗುವುದು. ಈ ಸ್ಥಾನ ಹಂಚಿಕೆಯಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಪ್ರಥಮ ಬಿ.ಎಫ್.ಎ. ತರಗತಿಯ ವಿದ್ಯಾಥಿಗಳ ಪ್ರವೇಶಾತಿಗೆ ವಿಭಾಗಗಳ ಆಯ್ಕೆ ವಿಧಾನ: ಕೆಳಕಂಡ ವಿಷಯಗಳಲ್ಲಿ ಗಳಿಸಿರುವ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

| | |
|---|---|
| ಅನ್ವಯಕಲೆ | ಭಾಷಾವಿಷಯ + ಡ್ರಾಯಿಂಗ್ + 2ಡಿ |
| ಚಿತ್ರಕಲೆ | ಸ್ಟೋರಿ ಆಫ್ ಆರ್ಟ್ಸ್ + ಡ್ರಾಯಿಂಗ್ + ಕಲರ್ |
| ಗ್ರಾಫಿಕ್ಸ್ | ಡ್ರಾಯಿಂಗ್ + ಪ್ರಿಂಟ್ ಮೇಕಿಂಗ್ |
| ಶಿಲ್ಪಕಲೆ | ಡ್ರಾಯಿಂಗ್ + 3ಡಿ |
| ಛಾಯಾಚಿತ್ರ ಮತ್ತು ಛಾಯಾಪತ್ರಿಕೋದ್ಯಮ | ಭಾಷಾವಿಷಯ + ಸ್ಟೋರಿ ಆಫ್ ಆರ್ಟ್ಸ್+ 2ಡಿ |
| ಕಲಾ ಇತಿಹಾಸ | ಸ್ಟೋರಿ ಆಫ್ ಆರ್ಟ್ಸ್+ ಭಾಷಾವಿಷಯ |

ಪ್ರಥಮ ಬಿ.ಎಫ್.ಎ. ತರಗತಿಯ 50 ವಿಧ್ಯಾರ್ಥಿಗಳ ಪ್ರವೇಶಾತಿಗೆ ವಿಭಾಗಗಳ ಹಂಚಿಕೆ ವಿಧಾನ:

| | |
|---|---|
| ಅನ್ವಯಕಲೆ | 25% |
| ಚಿತ್ರಕಲೆ | 20% |
| ಗ್ರಾಫಿಕ್ಸ್ | 20% |
| ಶಿಲ್ಪಕಲೆ | 15% |
| ಛಾಯಾಚಿತ್ರ ಮತ್ತು ಛಾಯಾಪತ್ರಿಕೋದ್ಯಮ | 02% |
| ಕಲಾ ಇತಿಹಾಸ | 05% |

ಕಲಾಭಿರುಚಿ ಪರೀಕ್ಷೆ: ಮೊದಲನೆಯ ಬಿ.ಎಫ್.ಎ. ಶಿಕ್ಷಣಕ್ಕೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಕಲಾಭಿರುಚಿ ಪರೀಕ್ಷೆ ಹಾಗೂ ವೈಯುಕ್ತಿಕ ಸಂದರ್ಶನಗಳು ಇರುತ್ತವೆ.

ಶುಲ್ಕ ಪಾವತಿ: ನಿಗಧಿ ಪಡಿಸಿರುವ ಶುಲ್ಕಗಳನ್ನು ನಿಗಧಿತ ದಿನಾಂಕದೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಶುಲ್ಕ ಪಾವತಿ ಮಾಡಲು ನಿಗಧಿಪಡಿಸಿದ ದಿನಾಂಕದ ತರುವಾಯ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ದಂಡಶುಲ್ಕವನ್ನು ವಸೂಲು ಮಾಡಲಾಗುವುದು. ಈ ಅವಧಿಯಲ್ಲಿ ಶುಲ್ಕವನ್ನು ಸಂದಾಯ ಮಾಡದವರು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ.

ಗ್ರಂಥಾಲಯ/ **ವಾಚನಾಲಯ:** ಕಲೆಯ ವಿವಿಧ ಅಂಶಗಳಿಗೆ ಸಂಬಂಧಿಸಿದ 5667 ಗ್ರಂಥಗಳಿರುವ ಗ್ರಂಥಾಲಯವು ಅಕಾಡೆಮಿಯಲ್ಲಿದೆ. ಅಕಾಡೆಮಿಯ ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು ಮತ್ತು ಗ್ರಂಥಾಲಯ ಕಾರ್ಡು ಪಡೆದು ಗ್ರಂಥಾಲಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಗ್ರಂಥಾಲಯದ ಕೆಲಸದ ವೇಳೆ: 1030 ರಿಂದ ಸಂಜೆ 5:30ರವರಗೆ (ವಿರಾಮ ವೇಳೆ ಹೊರತುಪಡಿಸಿ)

ಸಾಮಾಗ್ರಿ ವೆಚ್ಚ: ಪ್ರವೇಶ ಹೊಂದಿದ ಪ್ರಥಮ ಮತ್ತು ದ್ವಿತೀಯ ಮೂಲತರಗತಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 150ರಂತೆ ವಾರ್ಷಿಕ ರೂ. 1500 ಮೀರದಂತೆ ಹಾಗೂ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಿ.ಎಫ್.ಎ. ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 200 ವಾರ್ಷಿಕ 2000ರೂಗಳಿಗೆ ಮೀರದಂತೆ ಹಾಜರಾತಿ ಆಧಾರ ಅನುಸರಿಸಿ ಸಾಮಾಗ್ರಿವೆಚ್ಚವನ್ನು ವಿತರಿಸಲಾಗುವುದು.

**ಸೂಚನೆ:** ಶೈಕ್ಷಣಿಕ ಸಾಲಿನ ಮಧ್ಯದಲ್ಲಿ ಶಿಕ್ಷಣವನ್ನು ಬಿಟ್ಟುಹೋಗುವ ವಿದ್ಯಾರ್ಥಿಗಳು ಪಡೆದ ಸಾಮಾಗ್ರಿವೆಚ್ಚಗಳ ಪೂರ್ಣ ಮೊಬಲಗನ್ನು ಅಕಾಡೆಮಿಗೆ ಮರುಪಾವತಿ ಮಾಡತಕ್ಕದ್ದು.

**ಹಾಜರಾತಿ:** ವಿದ್ಯಾರ್ಥಿ/ವಿದ್ಯಾರ್ಥಿನಿ ಪ್ರತಿಯೊಂದು ವಿಷಯದಲ್ಲಿ ನಡೆದಿರುವ ತರಗತಿಗಳ ಪೈಕಿ ಶೇ. 75ಕ್ಕೆ ಕಡಿಮೆಯಿಲ್ಲದಂತೆ ಹಾಜರಾಗಿದ್ದರೆ ಮಾತ್ರ ಆ ಸಾಲಿನ ಹಾಜರಾತಿಯ ಆಗತ್ಯವನ್ನು ಅವರು ಪೂರೈಸಿರುವರು ಎಂದು ಪರಿಗಣಿಸಲಾಗುತ್ತದೆ. ವಿದ್ಯಾರ್ಥಿಯ ಶೇ. 15 ಭಾಗದವರೆಗಿನ ಹಾಜರಾತಿಯ ಕೊರತೆಯನ್ನು ವಿಶ್ವವಿದ್ಯಾನಿಲಯವು ನಿಗಧಿಪಡಿಸುವ ಶುಲ್ಕ ಪಾವತಿಮಾಡಿ ಕಾವಾದ ಡೀನ್‌ರವರ ಶಿಫಾರಸ್ಸಿನ ಮೇರೆಗೆ ಕುಲಪತಿಗಳು ಮನ್ನಾ ಮಾಡಬಹುದಾಗಿರುತ್ತದೆ. ಪ್ರತಿಯೊಂದು ವಿಷಯದಲ್ಲಿ ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ಹಾಜರಾತಿಯ ಕನಿಷ್ಠ ಅಗತ್ಯಗಳನ್ನು ಪೂರೈಸದಿರುವ ಅಭ್ಯರ್ಥಿಗೆ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯ ನಡೆಸುವ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.

**ಪರೀಕ್ಷಾ ಕ್ರಮ:** ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ನಿಯಾಮಾನುಸಾರ ನಡೆಸಲಾಗುವುದು.

## ಎಂ.ಎಫ್.ಎ. ವಿವರಣ ಪತ್ರ:

ಶೈಕ್ಷಣಿಕ ವರ್ಷ2002-03ರಿಂದ ಕಲೆಯ ಮೂರು ವಿಭಾಗಗಳಲ್ಲಿ (ಚಿತ್ರಕಲೆ, ಗ್ರಾಫಿಕ್ಸ್ ಹಾಗೂ ಶಿಲ್ಪಕಲೆ) ಸ್ನಾತಕೋತ್ತರ ಪದವಿ (ಎಂ.ಎಫ್.ಎ) ಆರಂಭಿಸಿದೆ. ನಗರದ ಹೃದಯ ಭಾಗದಲ್ಲಿರುವ ಸಿ.ಟಿ.ಐ. ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿವೆ.

ಕಲೆಯ ವಿವಿಧ ಪ್ರಕಾರಗಳಲ್ಲಿ ಹೊಸದಾಗಿ ನಡೆಯುತ್ತಿರುವ ಅವಿಷ್ಕಾರಗಳ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡುವ ಉದ್ದೇಶದಿಂದ ಹೆಸರಾಂತ ಕಲಾವಿದರನ್ನು ಹಾಗೂ ವೃತ್ತಿಪರರನ್ನು ಅತಿಥಿ ಉಪನ್ಯಾಸಕರನ್ನಾಗಿ ಆಹ್ವಾನಿಸಿ ಕಾರ್ಯಾಗಾರ, ಚರ್ಚೆ, ಸ್ಲೈಡ್ ಶೋ ಮುಂತಾದವುಗಳನ್ನು ಸಂಯೋಜಿಸಿ ವಿದ್ಯಾರ್ಥಿಗಳಲ್ಲಿ ಸುಪ್ತಚೇತನ ಹೊರಹೊಮ್ಮುವಂತೆ ಮಾಡಿ ಪಠ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಅನುಕೂಲ ವಾತಾವರಣ ಕಲ್ಪಿಸಲಾಗಿದೆ.

ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ/ ಗ್ರಾಫಿಕ್ಸ್ ಕಲೆ/ ಶಿಲ್ಪಕಲೆ

1. ಅವಧಿ: 2 ವರ್ಷಗಳು
2. ಅರ್ಹತೆ: ಚಿತ್ರಕಲೆ, ಗ್ರಾಫಿಕ್ಸ್ ಅಥವಾ ಶಿಲ್ಪಕಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಅಥವಾ ಮಾನ್ಯತೆ ಪಡೆದ ಸಂಸ್ಥೆಯಿಂದ ಪದವಿ ಪಡೆದವರಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸಂಬಂಧಿಸಿದ ವಿಭಾಗದ ಮುಖ್ಯಸ್ಥರು ವಿಷಯದಲ್ಲಿನ ಕಲಾ ನೈಪುಣ್ಯತೆಯನ್ನು ಪರೀಕ್ಷಿಸಿ ಹಾಗೂ ಅವರು ಹಿಂದೆ ರಚಿಸಿರುವ ಕಲಾಕೃತಿಗಳನ್ನು ಗಮನಿಸಿ ಪ್ರವೇಶ ನೀಡಲಾಗುತ್ತದೆ. ಅರ್ಜಿದಾರರು ಪ್ರವೇಶ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನದಲ್ಲಿ ಉತ್ತೀರ್ಣರಾಗಬೇಕು.

ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ

| | |
|---|---|
| ಪ್ರಥಮ ವರ್ಷ<br>ಪ್ರಾಯೋಗಿಕ ವಿಷಯ (ಮೇಜರ್)<br>ಅ. ಭಾವಚಿತ್ರ ರಚನೆ/ ಭಿತ್ತಿ ಚಿತ್ರ/ ಸೃಜನಾತ್ಮಕ ಚಿತ್ರರಚನೆ | ಅಂತಿಮ ವರ್ಷ<br>ಪ್ರಾಯೋಗಿಕ ವಿಷಯ (ಮೇಜರ್)<br>ಅ. ಭಾವಚಿತ್ರ ರಚನೆ/ ಭಿತ್ತಿ ಚಿತ್ರ/ ಸೃಜನಾತ್ಮಕ ಚಿತ್ರರಚನೆ<br>ಅ. ಡೆಸರ್ಟೇಷನ್ ಕಡ್ಡಾಯವಾಗಿರುತ್ತದೆ. |
| ಥಿಯರಿ ಪಠ್ಯಕ್ರಮ (ಮೈನರ್)<br>ಅ. ಫಿಲಾಸಫಿ ಆಫ್ ಆರ್ಟ್<br>ಆ. ಹಿಸ್ಟರಿ ಆಫ್ ಪೇಂಟಿಂಗ್<br>ಇ. ಮಾಡರ್ನ್ ಆರ್ಟ್ | ಥಿಯರಿ ಪಠ್ಯಕ್ರಮ (ಮೈನರ್)<br>ಅ. ಫಿಲಾಸಫಿ ಆಫ್ ಆರ್ಟ್<br>ಆ. ಹಿಸ್ಟರಿ ಆಫ್ ಪೇಂಟಿಂಗ್<br>ಇ. ಮಾಡರ್ನ್ ಆರ್ಟ್ |

ಸ್ನಾತಕೋತ್ತರ ಪದವಿಯಲ್ಲಿ ಗ್ರಾಫಿಕ್ಸ್

| | |
|---|---|
| ಪ್ರಥಮ ವರ್ಷ<br>ಪ್ರಾಯೋಗಿಕ ವಿಷಯ (ಮೇಜರ್)<br>ಪ್ರಾಯೋಗಿಕ (ಐಚ್ಛಿಕ) ವಿದ್ಯಾರ್ಥಿಗಳು ಕೆಳಗಿನ ಯಾವುದೇ ಎರಡು ವಿಭಾಗಳಲ್ಲಿ ಪರಿಣತ ಹೊಂದಬಹುದು.<br>1. ರಿಲೀಫ್ ಪ್ರೋಸೆಸ್<br>2. ಇಂಟಾಗ್ಲಿಯೋ ಪ್ರೋಸೆಸ್<br>3. ಪ್ಲೇನೋಗ್ರಾಫಿಕ್ ಪ್ರೋಸೆಸ್<br>4. ಸ್ಕ್ರೀನ್ ಪ್ರಿಟಿಂಗ್<br>5. ಕಂಪ್ಯೂಟರ್ ಗ್ರಾಫಿಕ್ಸ್ | ಪ್ರಥಮ ವರ್ಷ<br>ಪ್ರಾಯೋಗಿಕ ವಿಷಯ (ಮೇಜರ್)<br>ಪ್ರಾಯೋಗಿಕ (ಐಚ್ಛಿಕ) ವಿದ್ಯಾರ್ಥಿಗಳು ಕೆಳಗಿನ ಯಾವುದೇ ಎರಡು ವಿಭಾಗಳಲ್ಲಿ ಪರಿಣಿತಿ ಹೊಂದಬಹುದು.<br>1. ರಿಲೀಪ್ ಪ್ರೋಸೆಸ್<br>2. ಇಂಟಾಗ್ಲಿಯೋ ಪ್ರೋಸೆಸ್<br>3. ಪ್ಲೇನೋಗ್ರಾಫಿಕ್ ಪ್ರೋಸೆಸ್<br>4. ಸ್ಕ್ರೀನ್ ಪ್ರಿಂಟಿಂಗ್<br>5. ಕಂಪ್ಯೂಟರ್ ಗ್ರಾಫಿಕ್ಸ್<br>2. ಡೆಸರ್ಟೇಷನ್ ಕಡ್ಡಾಯವಾಗಿರುತ್ತದೆ. |
| ಥಿಯರಿ ಪಠ್ಯಕ್ರಮ (ಮೈನರ್)<br>1. ಮೇಥಡ್ಸ ಅಂಡ್ ಮೇಟಿರಿಯಲ್ಸ್<br>2. ಮಾಡರ್ನ್ ಆರ್ಟ್<br>3. ಹಿಸ್ಟರಿ ಆಫ್ ಪ್ರಿಂಟ್ ಮೇಕಿಂಗ್ | ಥಿಯರಿ ಪಠ್ಯಕ್ರಮ (ಮೈನರ್)<br>1. ಮೇಥಡ್ಸ ಅಂಡ್ ಮೇಟಿರಿಯಲ್ಸ್<br>2. ಮಾಡರ್ನ್ ಆರ್ಟ್<br>3. ಹಿಸ್ಟರಿ ಆಫ್ ಪ್ರಿಂಟ್ ಮೇಕಿಂಗ್ |

ಸ್ನಾತಕೋತ್ತರ ಪದವಿಯಲ್ಲಿ ಶಿಲ್ಪಕಲೆ

| ಪ್ರಥಮ ವರ್ಷ | ಪ್ರಥಮ ವರ್ಷ |
|---|---|
| ಪ್ರಾಯೋಗಿಕ ವಿಷಯ (ಮೇಜರ್)<br>1. ಕ್ರಿಯೇಟಿವ್ ಸ್ಕಲ್ಪಚರ್/ ಸೆರಾಮಿಕ ಸ್ಕಲ್ಪಚರ್/ ಭಾವಶಿಲ್ಪ (ಪೋರ್ಟ್ರೇಚರ್) | ಪ್ರಾಯೋಗಿಕ ವಿಷಯ (ಮೇಜರ್)<br>1. ಕ್ರಿಯೇಟಿವ್ ಸ್ಕಲ್ಪಚರ್/ ಸೆರಾಮಿಕ ಸ್ಕಲ್ಪಚರ್/ ಭಾವಶಿಲ್ಪ (ಪೋರ್ಟ್ರೇಚರ್)<br>2. ಡೆಸರ್ಟೇಷನ್ ಕಡ್ಡಾಯವಾಗಿರುತ್ತದೆ. |
| ಥಿಯರಿ ಪಠ್ಯಕ್ರಮ (ಮೈನರ್)<br>ಅ. ಫಿಲಾಸಫಿ ಆಫ್ ಆರ್ಟ್<br>ಆ. ಮಾಡರ್ನ್ ಆರ್ಟ್<br>ಇ. ಹಿಸ್ಟರಿ ಆಫ್ ಸ್ಕಲ್ಪಚರ್ | ಥಿಯರಿ ಪಠ್ಯಕ್ರಮ (ಮೈನರ್)<br>ಅ. ಫಿಲಾಸಫಿ ಆಫ್ ಆರ್ಟ್<br>ಆ. ಮಾಡರ್ನ್ ಆರ್ಟ್<br>ಇ. ಹಿಸ್ಟರಿ ಆಫ್ ಸ್ಕಲ್ಪಚರ್ |

**ಸೀಟುಗಳ ಹಂಚಿಕೆ:** ಮೇಲ್ಕಂಡ ಎಲ್ಲಾ ಕೋರ್ಸ್‌ಗಳಿಗೆ ಒಟ್ಟು 30 ಸೀಟುಗಳು ಮಾತ್ರವಿದ್ದು, ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯದವರು ನಿರ್ಧರಿಸಿದ ಫಲಿತಾಂಶ ಹಾಗೂ ವಿಭಾಗವು ಮತ್ತು ಆಯ್ಕೆ ಸಮಿತಿ ನಡೆಸುವ ಪ್ರವೇಶ ಪರೀಕ್ಷೆ ಮತ್ತು ವೈಯುಕ್ತಿಕ ಸಂದರ್ಶನದ ಮೇಲೆ ಧೃಡಪಡುತ್ತದೆ. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಸೇರ್ಪಡೆಯಾದ ಪ್ರತಿಯೊಬ್ಬ ವಿದ್ಯಾರ್ಥಿಯು ಸಂಸ್ಥೆಯು ವಿಧಿಸುವ ಷರತ್ತು ಮತ್ತು ಶಿಸ್ತುಗಳನ್ನು ತರಗತಿಯಲ್ಲಾಗಲೀ, ಕ್ಯಾಂಪಸ್‌ನಲ್ಲಾಗಲೀ ಅಥವಾ ಪಠ್ಯೇತರ ಚಟುವಟಿಕೆಯಲ್ಲಾಗಲೀ ಕಡ್ಡಾಯವಾಗಿ, ಕಟ್ಟುನಿಟ್ಟಾಗಿ ಪರಿಪಾಲಿಸತಕ್ಕದ್ದು. ಪರೀಕ್ಷೆಗೆ ಹಾಜರಾಗಬಯಸುವ ವಿದ್ಯಾರ್ಥಿಗೆ ಶೇ.75 ಹಾಜರಾತಿ ಅವಶ್ಯವಾಗಿರುತ್ತದೆ. ಎಸ್.ಸಿ. /ಎಸ್.ಟಿ ಸೀಟುಗಳನ್ನು ಸರ್ಕಾರಿ ನಿಯಮಾವಳಿಯಂತೆ ಕಾಯ್ದಿರಿಸಲಾಗುತ್ತದೆ.

ಪ್ರವೇಶಕ್ಕಾಗಿ ಅರ್ಜಿಗಳನ್ನು ಡೀನ್, ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ, ಸಯ್ಯಾಜಿರಾವ್ ರಸ್ತೆ, ಮೈಸೂರು– 570001, ಕರ್ನಾಟಕ, ಭಾರತ, ದೂರವಾಣಿ 0821–2438931. ಇಲ್ಲಿ ರೂ. 100ನ್ನು ಖುದ್ದಾಗಿ ಸಂದಾಯ ಮಾಡಿ ಪಡೆಯಬಹುದು. ಅಂಚೆ ಮೂಲಕ ಅರ್ಜಿ ಕೋರುವವರು ಡೀನ್, ಕಾವಾ, ಮೈಸೂರು, ಇವರ ಹೆಸರಿನಲ್ಲಿ ರೂ. 125/– ಕ್ಕೆ ಡಿ.ಡಿ. ಖರೀದಿಸಿ ಕಳುಹಿಸಿ ಪಡೆಯಬಹುದು.

ವಿ.ಸೂ. ಪಠ್ಯಕ್ರಮಣಿಕೆ/ ಪರಿಕ್ಷಾ ವಿಧಾನ ಅಥವಾ ಯಾವುದೇ ನಿಯಮಗಳ ಬದಲಾವಣೆಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳ'ಟ್ಟಿರುತ್ತದೆ.

**ಈ ವಿವರಣ ಪತ್ರವು ಕಾನೂನುಬದ್ಧ ದಾಖಲೆಯಲ್ಲ.**

## Details of students admitted to Foundation, B.F.A. and M.F.A courses for the academic year 2011-12

| S.N | Course | | | Painting | | Grapics | | Sculpture | | Photography & PJ | | Applied Art | | Art History | | Tot |
|---|---|---|---|---|---|---|---|---|---|---|---|---|---|---|---|---|
| | | M | F | M | F | M | F | M | F | M | F | M | F | M | F | |
| 1 | I Foundation | 47 | 17 | - | - | - | - | - | - | - | - | - | - | - | - | 64 |
| 2 | II Foundation | 39 | 16 | - | - | - | - | - | - | - | - | - | - | - | - | 55 |
| 3 | I B.F.A | - | - | 8 | 2 | 0 | 2 | 1 | 3 | 5 | 1 | 11 | 4 | 0 | 0 | 37 |
| 4 | II B.F.A | - | - | 6 | 3 | 1 | 5 | 10 | 0 | 6 | 2 | 8 | 10 | 0 | 0 | 51 |
| 5 | III B.F.A | - | - | 2 | 1 | 4 | 2 | 1 | 6 | 0 | 2 | 7 | 4 | 0 | 0 | 29 |
| | Total | 86 | 33 | 16 | 6 | 5 | 9 | 12 | - | 11 | 5 | 26 | 18 | - | - | 236 |

## PHOTOGRAPHS:



CAVA front view



CAVA night view



CAVA image



CAVA Corridor

## CAVA EVENTS: 2011-12

| ದಿನಾಂಕ[Date] | ಕಾರ್ಯಕ್ರಮದ ವಿವರ [Event name] |
| --- | --- |
| | |

## ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಹುದ್ದೆ ಇತರೆ ವಿವರಗಳು

| | | |
|---|---|---|
| **ಪ್ರಥಮ ಮೇಲ್ಮನವಿ ಪ್ರಾಧಿಕಾರಿ** | ಡೀನ್ ಕಾವಾ,<br>ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ,<br>ಮೈಸೂರು<br>ಮನೆ ವಿಳಾಸ:<br>ಚಿಕ್ಕೇಗೌಡನ ಕೊಪ್ಪಲು, ಇಲವಾಲ<br>ಹೋಬಳಿ, ಮೈಸೂರು ತಾಲೂಕು,<br>ಮೈಸೂರು. | ದೂರವಾಣಿ:<br>ಕಛೇರಿ:0821-2438931<br>ಪ್ಯಾಕ್ಸ ನಂ.:0821-2438931 |
| **ಸಾರ್ವಜನಿಕ ಮಾಹಿತಿ ಅಧಿಕಾರಿ** | ಮುಖ್ಯ ಆಡಳಿತಾಧಿಕಾರಿ,<br>ಕಾವಾ, ಸಿ.ಟಿ.ಐ ಕಟ್ಟಡ,<br>ಸಯ್ಯಾಜಿರಾವ್ ರಸ್ತೆ, ಮೈಸೂರು<br>ಮನೆ ವಿಳಾಸ:<br>ನಂ.12, ಸುಕೃತ, ವಾಣಿವಿಲಾಸ ರಸ್ತೆ,<br>ಮೈಸೂರು- 4 | ದೂರವಾಣಿ:<br>ಕಛೇರಿ: 0821-2438931 |
| **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ** | ಕಛೇರಿ ವ್ಯವಸ್ಥಾಪಕರು,<br>ಕಾವಾ, ಸಿ.ಟಿ.ಐ ಕಟ್ಟಡ,<br>ಸಯ್ಯಾಜಿರಾವ್ ರಸ್ತೆ, ಮೈಸೂರು<br>ಮನೆ ವಿಳಾಸ:<br>ನಂ. 102, ಸಿದ್ಧಿವಿನಾಯಕ ಬ್ಲಾಕ್,<br>ಡಾ.ರಾಜಕುಮಾರ್ ರಸ್ತೆ, ಟೀಚರ್ಸ್<br>ಲೇಔಟ್ ರಸ್ತೆ, ಮೈಸೂರು. | ದೂರವಾಣಿ:<br>ಕಛೇರಿ:0821-2438931<br>9740123397 |

~|*|~~|*|~~|*|~

ಹೆಚ್.ಎಂ.ಜೆ. ಗಣಕಯಂತ್ರ ವಿಭಾಗ, ಕಾವಾ, ಮೈಸೂರು.